have heard is that neither workers have been able to collect leaves intime, nor the leaves are tied up and ready for sale to the manufacturers. I would request the hon'ble Minister to go into the details and see that some relief is given to the beedi manufac. turers so that more and more relief is given to the beedi rollers-

SRI K. H. PATIL. Madam, my Department is aware of all the difficulties that have been envisaged by the hon'ble members. I quite agree with their views. My humble duty is to present it before the Finance Minister to reduce the tax, I cannot assure this house whether the tax can be reduced or not. But on their behalf I will advocate the cause before the Finance Minister and see that what best could be done in the matter, In the meanwhile I am also approaching the Madhya Pradesh Government to see that as far as possible beedi leaves are sent to us out of the notionalised quota.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿದೇಶಿ ಏಜೆಂಟ್‌ರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಆಗುತ್ತಿರುವ ವಂಚನೆ

೧೧.೦೦ ಎ.ಎಂ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಉಪಾಧ್ಯಕ್ಷಣಿಯವರೇ, ನಿನ್ನೆ ಮೊನ್ನೆಯಿಂದ ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿಬಂದು ತರಬೇತಿ ಕೇಂದ್ರವನ್ನು ವಿದೇಶಿಏಜೆಂಟ್‌ರು ತೆರೆದು ಹೊರದೇಶದಲ್ಲಿ ಜಾಬ್ ಓರಿಯೆಂಟೆಡ್ ಕೋರ್ಸ್ ಅನ್ನು ನಿಮಗೆ ಕೊಡಿಸಿಕೊಡುತ್ತೇನೆ ಎಂದು ವಿದ್ಯಾರ್ಥಿಗಳಿಗೆ ಹೇಳಿ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಆತನ ಹೆಸರು ಫಿಶ್ ಬ್ಯಾಕ್ ಎಂದು ಆತ ವಿದೇಶಿ ಪ್ರಜೆ. ಆಸ್ಟ್ರೇಲಿಯಾ, ಕೆನಡಾ, ಯು ಕೆ ಇತ್ಯಾದಿ ಹೊರದೇಶ ಗಳಲ್ಲಿ ಹೆಚ್ಚು ಹೆಚ್ಚು ವಿದ್ಯಾಭ್ಯಾಸ ಮಾಡಲಿಕ್ಕೆ ಅವಕಾಶ ಮಾಡಿಸಿಕೊಡುತ್ತೇನೆ ಎಂದು ಹೇಳಿಕೊಂಡು ಅಲ್ಲಿ ನೆಲಸಿದ್ದಾನೆ. ಇದೇ ಪ್ರಜೆ ೧೯೮೬ನೇ ಇಸವಿಯಲ್ಲಿ ಮದ್ರಾಸ್‌ನ ಒಂದು ಫೈವ್ ಸ್ಟಾರ್ ಹೋ ಟೆಲ್‌ನಲ್ಲಿ ತಂಗಿ ಇದೇ ರೀತಿ ಪ್ರಚಾರ ಮಾಡಿ ಹೆಚ್ಚು ಎಜುಕೇಶನ್ ಕೊಡಿಸುತ್ತೇನೆಂದು ಹೇಳಿ ಹಲವಾರು ವಿದ್ಯಾರ್ಥಿಗಳನ್ನು ಕರೆದಿದ್ದಾನೆ. ಅವನ ಮಾತಿನಂತೆ ಚಿನ್ನರಾಯಪಟ್ಟಣದ ಒಬ್ಬ ವಿದ್ಯಾರ್ಥಿ ೧೯೮೬ನೇ ಇಸವಿಯಲ್ಲಿ ಆಸ್ಟ್ರೇಲಿಯಾಕ್ಕೆ ಹೋಗಿದ್ದ. ಅಲ್ಲಿಗೆ ಹೋಗಿ ನೋಡಿದಾಗ ಅದು ಎಡೆಡ್ ಇನ್‌ಸ್ಟಿಟ್ಯೂಷನ್ ಆಗಿರಲಿಲ್ಲ. ಮೂರು ವರ್ಷಗಳ ಕಾಲ ಕಾಲೇಜು ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿ ಯಾವುದೇ ಸರ್ಟಿಫಿಕೇಟ್ ಸಿಗದೇ ಇರತಕ್ಕ ಸಂದರ್ಭದಲ್ಲಿ ಅಲ್ಲಿನ ಜನರ ಸಹಕಾರ ತೆಗೆದುಕೊಂಡು ಆಸ್ಟ್ರೇಲಿಯಾದ ಕೋರ್ಟಿಗೆ ಅರ್ಜಿ ಹಾಕಿದ ಆಸ್ಟ್ರೇಲಿಯಾದ ಕೋರ್ಟ್ ತೀರ್ಮಾನ ಕೊಟ್ಟಿದೆ. ಆ ಹುಡಗನಿಗೆ ಅನ್ಯಾಯ ಆಗಿದೆ. ಈ ಇನ್‌ಸ್ಟಿಟ್ಯೂಷನ್ ಅನ್ಯಾಯ ಮಾಡಿದೆ ಎಂದು ಹೇಳಿ ೩೦೫೭ ಡಾಲರ್ ದುಡ್ಡು ಆ ವಿದ್ಯಾರ್ಥಿಗೆ ಕೊಡಬೇಕೆಂದು ಹೇಳಿದೆ. ಈಗ ಏನು ಆಗಿದೆ ಎಂದರೆ, ನಿನ್ನೆಯಿಂದ ಸುಮಾರು ಐನೂರು, ಸಾವಿರಾರು ವಿದ್ಯಾರ್ಥಿಗಳು ಆ ಒಂದು ತರಗತಿಯಲ್ಲಿ ಕುಳಿತಿದ್ದಾರೆ. ಈ ರೀತಿ ಹುಡಗರಿಗೆ ಆಗಿರತಕ್ಕ ಅನ್ಯಾಯ ಮುಂದಿನ ಪೀಳಿಗೆಗೆ ಆಗಬಾರದು. ಇದಕ್ಕೆ ದಯವಿಟ್ಟು ಸಂಬಂಧ ಪಟ್ಟ ಇಲಾಖೆಯವರು ಇದನ್ನು ಪರಿಶೀಲನೆ ಮಾಡಿ ಈ ಸದನಕ್ಕೆ ತಿಳಿಸಬೇಕು. ಆತ ಎನು ಮಾಡುತ್ತಿದಾನೆ, ಎಂದು ತಿಳಿಸಬೇಕು. ಕೇಂದ್ರ ಸರ್ಕಾರದವರು ಏನಾದರೂ ಪರವಾನಗಿ ಇದಕ್ಕೆ ಕೊಟ್ಟಿದೆಯೇ ಅಥವಾ ರಾಜ್ಯ ಸರ್ಕಾರದವರು ಪರವಾನಗಿ ಕೊಟ್ಟಿದೆಯೇ ಈ ರೀತಿ ವಿದ್ಯಾರ್ಥಿಗಳಿಗೆ ಮೋಸ ಆಗುತ್ತಾ ಇರತಕ್ಕದ್ದರ ಬಗ್ಗೆ ಮತ್ತು ವಿದೇಶಿ ಜಾಲವನ್ನು ಪತ್ತೆ ಹಚ್ಚುವುದರಲ್ಲಿ ಸರ್ಕಾರ ಜಾಗ್ರತೆ ಆಗಬೇಕು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಸಂಬಂಧಪಟ್ಟ ಎಲ್ಲಾ ಪೇಪರ್‌ಗಳನ್ನು ಕಳುಹಿಸಿ ಕೊಡಿ.

ಶ್ರೀ ಎಲ್. ಆರ್. ಶಿವರಾಮೆಗೌಡ.—ಕಳುಹಿಸಿಕೊಡುತ್ತೇನೆ.

ಶ್ರೀ ಹರ್ಷಕುಮಾರ್‌ಗೌಡ.—ಈ ರೀತಿ ಕರ್ನಾಟಕದಲ್ಲಿ ವಿದೇಶಿ ಪುಂದಿ ಜಾಸ್ತಿ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಈ ರೀತಿ ವಂಚನೆ ಮಾಡುತ್ತಿರುವ ಸಂಸ್ಥೆಗಳು ಬಹಳ ಇದ್ದು ಬೆಂಗಳೂರಿನಲ್ಲಿ ಅನೇಕ ಕಡೆ ಈ ರೀತಿ ನಡೆಯುತ್ತಿದೆ. ಸಾವಿರಾರು ಜನ ಲಕ್ಷಾಂತರ ಜನ ಇಂತಹ ವಂಚನೆಗೆ ಒಳಪಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ತೀವ್ರತರವಾದ ಗಮನವನ್ನು ಹರಿಸಬೇಕು. ಈಗ ಬಂದಿರತಕ್ಕ ಮನುಷ್ಯ ಯಾವ ಹೋಟಲ್‌ನಲ್ಲಿ ಇದ್ದಾನೆ. ಆ ಮನುಷ್ಯ ಒಬ್ಬ ದಳ್ಳಾಳಿ. ಅವನನ್ನು ಕೂಡಲೇ ಬಂಧಿಸಿ ಜೈಲಿಗೆ ಹಾಕತಕ್ಕ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅನೇಕ ಜನ ವಿದ್ಯಾರ್ಥಿಗಳಿಗೆ ತೊಂದರೆಗೆ ಸಿಲುಕುತ್ತಾರೆ. ಉದ್ಯೋಗ ಇಲ್ಲವೆಂದು ಹೇಳಿ ಯಾರೋ ಉದ್ಯೋಗ ಕೊಡುತ್ತಾರೆ ಎಂದು ಹೇಳಿ ಅಲ್ಲಿಗೆ ಹೋಗಿ ಈ ರೀತಿ ವಿದ್ಯಾರ್ಥಿಗಳು ಮೋಸಕ್ಕೆ ಒಳಪಟ್ಟಿದ್ದಾರೆ.

ಉಪಾಧ್ಯಕ್ಷರು.—ಇದರ ಬಗ್ಗೆ ಏನೂ ನೋಟೀಸ್ ಬಂದಿಲ್ಲ, ಏನೂ ಇಲ್ಲ. ಪೇಪರ್ ಕಳಿಸಿಲ್ಲ. ದಯವಿಟ್ಟು ಕಳುಹಿಸಿಕೊಡಿ ಆಗ ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಮೋಸದ ಪ್ರಕರಣ. ಪ್ರತಿದಿನ ನಡೆಯುತ್ತಿದೆ. ಉದ್ಯೋಗ ಕೊಡುತ್ತೇವೆ ಎಂದು ಹೇಳಿ.....

(ಗೊಂದಲ)

ಉಪಾಧ್ಯಕ್ಷರು,—ದಯವಿಟ್ಟು ಸಂಬಂಧಪಟ್ಟ ಕಾಗದಗಳನ್ನು ಕಳಿಸಿಕೊಡಲಿ.

(ಗೊಂದಲ)

ಶ್ರೀ ಹರ್ಷಕುಮಾರ್ ಗೌಡ. —ವಿದೇಶಿ ಜನಗಳು ಈ ರೀತಿ ಕರ್ನಾಟಕದಲ್ಲಿ ಬಂಧು ನೆಲಸುವುದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಕಳಿಸಿಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಬೇಕು. ಈ ತರದ ಮೋಸ ಆಗಿದೆ. ಆದರೂ ಸರ್ಕಾರದವರು ನಿದ್ದೆ ಮಾಡುತ್ತಿದ್ದಾರೆಯೇ ಹೇಗೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾಗರಾಜ್‌ರವರೇ, ಇದುವರೆಗೆ ಏನು ಚರ್ಚೆ ನಡೆಯಿತಲ್ಲ ಯಾರಾದರೂ ಏನಾದರೂ ಅದನ್ನು ಕೇಳಿದ್ದಾರೆಯೇ ?

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ನಿದ್ದೆ ಮಾಡುವುದಲ್ಲ, ಅವರು ನೆಟ್ಟಗೆ ನಿಂತುಕೊಂಡು ಮಾತನಾಡುತ್ತಿದ್ದಾರೆ, ನಾಗರಾಜ್‌ರವರು ಆರು ಆಡಿ ಎತ್ತರ ಇದ್ದಾರೆ. ಇಲ್ಲಿ ಕೇಳುವುದು ಇದೆ. ಇದು ನಿದ್ದೆ ಮಾಡುವುದಲ್ಲ.

ಉಪಾಧ್ಯಕ್ಷರು.—ಯಾರೂ ನಿದ್ದೆ ಮಾಡುತ್ತಿಲ್ಲ. ವಾಟಾಳ್‌ರವರೇ ತಾವು ಕೇಳಿ.

ಶ್ರೀ ವಾಟಾಳ್ ನಾಗರಾಜ್. —ಎಚ್ಚರ ಆಗಿದ್ದರೆ ಸರಿ...

ಶ್ರೀ ಕೆ. ಹೆಚ್. ರಂಗನಾಥ್.—ಸ್ವಲ್ಪ ತಾಳ್ಮೆಯಿಂದ ಕೇಳಿ. ೫೦–೫೫ ಲಕ್ಷ ಜನ ಬೆಂಗಳೂರಿನಲ್ಲಿದ್ದಾರೆ. ಯಾವನು ಏನು ಮಾಡುತ್ತಾನೆ ಎಂಬುದು ಗೊತ್ತಾಗುವುದಿಲ್ಲ. ನಾನು ಹೇಳುವುದನ್ನು ತಾವು ಸ್ವಲ್ಪ ತಾಳ್ಮೆಯಿಂದ ಇರಿ,

ಶ್ರೀ ವಾಟಾಳ್ ನಾಗರಾಜ್.—ತಾವು ಹಿರಿಯ ಸಚಿವರು...

ಉಪಾಧ್ಯಕ್ಷರು.—ತಾವು ಹೀಗೆ ನಿಂತುಕೊಳ್ಳಬೇಡಿ. ಅವರು ಹೇಳಲಿ, ತಾವು ಸ್ವಲ್ಪ ಕೇಳಿ.

ಶ್ರೀ ಕೆ. ಹೆಚ್. ರಂಗನಾಥ್ – ಶಿವರಾಮೇಗೌಡರು ವಿಷಯ ಪ್ರಸ್ತಾಪ ಮಾಡಿದರು. ಅವ ಪತ್ರಗಳನ್ನು ಕೊಡಲಿ. ಅದು ನನಗೆ ಸಂಬಂಧಪಟ್ಟದ್ದೊ ಅಥವಾ ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟದ್ದೊ ಎಂದು ನೋಡುತ್ತೇನೆ. ಆದರೆ ಅವರು ಪತ್ರ ಬರೆಯದೆ ಅಥವಾ ಯಾವುದಾವರೂ ನೋಟೀಸ್ ಕೊಡದೇ ಅವರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ತತ್‌ಕ್ಷಣ ಹೇಳಬೇಕು ಎಂದರೆ ಹೇಗೆ? ಇತ ಯಾವಾಗ ಬಂದ. ಯಾವ ಹೊಟೆಲ್‌ನಲ್ಲಿ ಇದ್ದಾನೆ ನೋಡುತ್ತೇನೆ, ಏನು ಮಾಡುವುದಕ್ಕೆ ಸಾಧ್ಯ ಇದೆ. ನಾವು ಖಾಸಗಿ ಶಾಲೆಗಳನ್ನು ಓಪನ್ ಮಾಡುವುದಕ್ಕೆ ಯಾರಿಗೂ ಅವಕಾಶ ಕೊಟ್ಟಿಲ್ಲ. ಆದರೂ ಬೆಳಗಾವಿಯಲ್ಲಿ ಗಲ್ಬರ್ಗಾದಲ್ಲಿ ಇತ್ಯಾದಿ ಪ್ರದೇಶದಲ್ಲಿ ಜಾಹೀರಾತು ಮಾಡುತ್ತಿದ್ದಾರೆ. ಉಪಾಧ್ಯಾಯರನ್ನು ನೇಮಕ ಮಾಡುತ್ತೇವೆ ಎಂದು ಕರೆಯುತ್ತಾರೆ. ವಿದ್ಯಾ ಇಲಾಖೆಯಲ್ಲಿ ನಮಗೆ ಸಾಕಷ್ಟು ಅಧಿಕಾರ ಇಲ್ಲ. ಸನ್ಮಾನ್ಯ ಉಪಾಧ್ಯಕ್ಷೆಯವರೇ ತಾವು ಸಹ ವಿದ್ಯಾ ಇಲಾಖೆಯಲ್ಲಿ ಇದ್ದವರು. ಯಾವ ಅಧಿಕಾರ ಯಾವ ಸೆಕ್ಷನ್‌ನಲ್ಲಿ ಅಧಿಕಾರ ಇದೆ ಪೋಲೀಸರಿಗೆ ಕಂಪ್ಲೈಂಟ್ಸ್ ಕೊಟ್ಟರು ಅವರು ಏನಾದರೂ ಮಾಡಕಕ್ಕೆ ಪರಿಸ್ಥಿತಿ ಬರುತ್ತದೆ, ಇದೆಲ್ಲಾ ನಡೆಯುತ್ತಿದೆ. ವಾಟಾಳ್ ನಾಗರಾಜ್‌ರವರು ಹೇಳಿದರು ಬಡಪಾಯಿ ಆರ್ಜಿ ಹಾಕಿದ್ದಾನೆ ಎಂದು ಹೇಳಿದರು ನೀವು ಹೇಳಿದ್ದನ್ನು ನಾನು ಕೇಳಿಸಿಕೊಳ್ಳುತ್ತಿದ್ದೇನೆ. ನಿದ್ದೆ ಮಾಡುತ್ತಾ ಇದ್ದಾರೆ ಎಂದು ಏಕೆ ಹೇಳಿದಿರಿ?

ಶ್ರೀ ವಾಟಾಳ್ ನಾಗರಾಜ್.—ನೀವು ನಿದ್ದೆ ಮಾಡುತ್ತಾ ಇಲ್ಲ ಎಂದು ಹೇಳಿದಿರಲ್ಲ. ಅಷ್ಟು ಸಾಕು.

ಶ್ರೀ ಕೆ. ಹೆಚ್. ರಂಗನಾಥ್.—ಇದೆಲ್ಲ ಇದೆ, ಇಂತಹ ಪರಿಸ್ಥಿತಿ ಬರಬಹುದು, ಇಂತಹ ಜನ ಹುಟ್ಟಿಕೊಳ್ಳಬಹುದು ಎಂದು ನಾವು ಅದಕ್ಕಾಗಿ ಕಾನೂನು ಮಾಡಿಲ್ಲ ಬಹಳಮಟ್ಟಿಗೆ ನಾವು ಮಾಡಬೇಕಾಗುತ್ತದೇನೋ. ಇಂಥವೆಲ್ಲ ನಿರ್ಬಂಧ ಮಾಡಬೇಕಾದರೆ ಏನಾದರೂ ಕಾನೂನು ಮಾಡತಕ್ಕಂಥ ಅವಶ್ಯಕತೆ ಇವತ್ತು ಬಿದ್ದಿದೆ. ಇದೆಲ್ಲಾ ನಡೆಯುತ್ತಾ ಇದೆ. ಈ ಸರ್ಕಾರ ಬಂದಮೇಲೆ ಒಂದು ಹೈಸ್ಕೂಲ್‌ಗೂ ಒಂದು ಕಾಲೇಜಿಗೂ ಅಪಕಾಶಕೊಟ್ಟಿಲ್ಲ. ಆವರೇ ಕಾಲೇಜು ನಡೆಸುವುದಕ್ಕೆ ಹೊರಟಿದ್ದಾರೆ, ಹುಡಗರನ್ನು ಸೇರಿಸಿಕೊಳ್ಳುತ್ತಾ ಇದ್ದಾರೆ ಕೆಲವು ಕಡೆ ಬೋರ್ಡ್ ಹಾಕಿದ್ದಾರೆ. ಕೆಲವು ಕಡೆ ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದಾರೆ. ಅದೆನ್ನು ನಿಲ್ಲಿಸುವುದಕ್ಕೆ ನನಗೆ ಏನು ಅಧಿಕಾರ ಇದೆ. ನೀವು ಈಗ ಪ್ರಸ್ತಾಪ ಮಾಡಿದಿರಿ ಇದು ಸಮಂಜಸವಾಗಿದೆ. ನಾನು ಸರ್ಕಾರದ ವತಿಯಿಂದ ನಿಮ್ಮನ್ನು ಅಭಿನಂದಿಸುತ್ತಾ ಇದ್ದೇನೆ. ತಾವು ನಮ್ಮ ಗಮನಕ್ಕೆ ತಂದಿದ್ದೀರಿ. ಯಾವುದಾದರೂ ಒಂದು ರೂಪದಲ್ಲಿ ಅದನ್ನು ಇಲ್ಲಿ ಎತ್ತಿದರೆ ಸಂಬಂಧಪಟ್ಟ ಇಲಾಖೆಗೆ ಅದನ್ನು ಕಳಿಸಿಕೊಡತಕ್ಕದ್ದು ಮತ್ತು ನನ್ನ ಇಲಾಖೆಗೆ ಸಂಬಂಧಪಟ್ಟದ್ದು ಇದ್ದರೆ ವಿವರಗಳನ್ನು ತರಿಸಿಕೊಳ್ಳತಕ್ಕಂಥಾದ್ದಕ್ಕೆ ಅಪಕಾಶವಾಗುತ್ತದೆ ಮತ್ತು ತಕ್ಷಣ ನಿಲ್ಲಿಸುವುದಕ್ಕೆ ಅನುಕೂಲವಾಗುತ್ತತ್ತೆ. ಇವತ್ತು ತಾವು ಪ್ರಸ್ತಾಪ ಮಾಡಿದ್ದೀರಿ, ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಸರ್ಕಾರದ ವತಿಯಿಂದ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದು ಪೋಲೀಸ್ ಇಲಾಖೆಗೆ ಸಂಬಂಧ ಪಡುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಹೌದು,

ಉಪಾಧ್ಯಕ್ಷರು.—ಈಗ ನಿಯಮ ೩೫ಳಿರ ಮೇರೆಗೆ ಪ್ರಸ್ತಾಪ ಮಾಡುವ ವಿಷಯ.

(ಗೊಂದಲ)

ಶ್ರೀ ಹರ್ಷಕುಮಾರ್‌ಗೌಡ,—ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ...

ಉಪಾಧ್ಯಕ್ಷರು—ಮೂರು ಜನ ಮಾತನಾಡಿದರೆ ಯಾರಿಗೆ ಕೇಳುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ,

(ಗೊಂದಲ)

ಉಪಾಧ್ಯಕ್ಷರು,—ನಿಯಮ ೩೫ಳಿರ ಮೇರೆಗೆ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಕಳೆದ ವಾರ ಈ ಸದನದಲ್ಲಿ ನಡೆದಂಥ...

(ಗೊಂದಲ)

ಉಪಾಧ್ಯಕ್ಷರು.—ಹೀಗೆ ೨-೩ ಜನ ಮಾತನಾಡಿದರೆ ಏನು ಅರ್ಥವಾಗುತ್ತದೆ.

(ಗೊಂದಲ)

ಡಾ॥ ಎನ್. ಬಿ. ನಂಜಪ್ಪ.—ಸುರೇಶ್ ಎನ್ನತಕ್ಕಂಥ ಒಬ್ಬ ನನ್ನ ಕಾನ್‌ಸ್ಟಿಟ್ಯೂಯೆನ್ಸಿ ಹುಡುಗ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಸಾಧಾರಣವಾದಂಥ ವ್ಯಾವಹಾರದಲ್ಲಿ ನಾನು ಆಪಾದನೆ ಮಾಡುತ್ತೇನೆ ಎಂದು ಅಲ್ಲ. ಕನಿಷ್ಪ ಈ ಗವರ್ನಮೆಂಟಿನ ಸೆಳೆಯುವ ಸೂಚನೆ ತೆಗೆದುಕೊಳ್ಳುವಾಗ ಒಂದು ವಿರೋಧ ಪಕ್ಷಕ್ಕೆ ಒಂದು ಆಳುವ ಪಕ್ಷಕ್ಕೆ ಕೊಡುವುದು ಒಂದು ಪದ್ಧತಿ. ಈ ನಡುವೆ ಆದು ಬರುವುದಿಲ್ಲ ಎಂದು ಆಪಾದನೆ ಮಾಡುವಾಗ ಅವರು ಕೊಡುವುದು ಅನ್ ಇಂಪಾರ್ಟೆಂಟ್ ಎಂದು ಹೇಳುವುದಿಲ್ಲ. ದಯಮಾಡಿ ಈ ಕಡೆಗೆ ಒಂದು, ಆ ಕಡೆಗೆ ಒಂದು ಕೊಡುವ ವ್ಯವಸ್ಥೆ ಮಾಡಿ.

ಉಪಾಧ್ಯಕ್ಷರು.—ಹಾಕಿಸೋಣ.

(ಗೊಂದಲ)

ಡಾ॥ ಎನ್. ಬಿ. ನಂಜಪ್ಪ.—ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ಮತ್ತು ಗಹನವಾದ ವಿಚಾರ ಎಂದು ಹೇಳುತ್ತೇನೆ. ಆಸ್ಟ್ರೇಲಿಯ ವಿಚಾರ ಮಾತನಾಡಿದೆವು ನನ್ನ ಕ್ಷೇತ್ರಕ್ಕೆ ಸೇರಿದ ಹುಡುಗನ ಬಗ್ಗೆ ಹೇಳಬೇಕಾಗಿದೆ. ನನಗೆ ದಯವಿಟ್ಟು ಎರಡು ನಿಮಿಷ ಅವಕಾಶಕೊಡಿ. I do not want to kill the time of this House. I know, what is the value of time. Unnecessarily they spend time.

ಉಪಾಧ್ಯಕ್ಷರು.—ಶಿವರಾಮೇಗೌಡರು ಆ ವಿಷಯದ ಬಗ್ಗೆ ಹೇಳಿದ್ದಾರೆ.

ಇಂಡಿಯಾದಿಂದ ವಿದ್ಯಾಭ್ಯಾಸಕ್ಕೆಂದು ಆಸ್ಟ್ರೇಲಿಯಾಕ್ಕೆ ಹೋದ ವಿದ್ಯಾರ್ಥಿಗಳು ಬೀದಿ ಪಾಲಾಗಿರುವ ಬಗ್ಗೆ

ಡಾ॥ ಎನ್. ಬಿ. ನಂಜಪ್ಪ.—೧೯೮೮ರಲ್ಲಿ ಮದ್ರಾಸಿನಲ್ಲಿ ಇಂಟರ್‌ವ್ಯೂ ನಡೆಸಿದ ಮೇಲೆ ಈ ಸುರೇಶ್ ಎಂಬ ಹುಡುಗ ಆಸ್ಟ್ರೇಲಿಯಾಕ್ಕೆ ವಿದ್ಯಾಭ್ಯಾಸ ಮಾಡುವುದಕ್ಕೆ ಹೋಗಿ ಎರಡು, ಎರಡೂವರೆ ವರ್ಷಗಳ ಕಾಲ ಅಲ್ಲಿ ವಿದ್ಯಾಭ್ಯಾಸಮಾಡಿ, ಅಲ್ಲಿ ಸರ್ಟಿಫಿಕೇಟ್ ಇಲ್ಲದೆ ಮತ್ತು ಅದಕ್ಕೆ ರೆಕಗ್ನಿಷನ್ ಇಲ್ಲ ಎಂದು ಗೊತ್ತಾದಮೇಲೆ, ಇವನು ಮತ್ತು ಇವನ ಜೊತೆಯಲ್ಲಿದ್ದಂಥ ಇನ್ನೂ ೬೦ ವಿದ್ಯಾರ್ಥಿಗಳು ಇಂಡಿಯಾದೇಶದಿಂದ ಆಸ್ಟ್ರೇಲಿಯಾಕ್ಕೆ ಹೋದಂಥವರು ಬೀದಿಪಾಲಾಗಿದ್ದಾರೆ. ಆ ಹುಡುಗ ಆಸ್ಟ್ರೇಲಿಯಾದ ಕೋರ್ಟಿಗೆ ಕೇಸ್ ಹಾಕಿದ ಮೇಲೆ, ಅಲ್ಲಿ ಏನು ಇನ್‌ಸ್ಟಿಟ್ಯೂಷನ್ ನಡೆಸುತ್ತಿದ್ದಾರೋ, ಅವರು ಆಸ್ಟ್ರೇಲಿಯನ್ ಡಾಲರ್ಸ್ ರೂಪದಲ್ಲಿ ೩೦೫೭.೫೫ ಡಾಲರ್ಸ್ ದಂಡವಾಗಿ ಅವನು ಖರ್ಚು ಮಾಡಿರತಕ್ಕಂಥಾದ್ದಕ್ಕೆ ಕೊಡಬೇಕೆಂದು ಡಿಸೈಡ್ ಆಗಿದೆ. ಹೀಗೆ ಡಿಸೈಡ್ ಆದಮೇಲೆ ಎರಡು ವರ್ಷಗಳ ಹಿಂದೆ ಮದ್ರಾಸ್‌ನಲ್ಲಿ ಯಾರು ಇಂತಹ ಒಂದು ಕೆಲಸ ಮಾಡಿದ್ದಾರೋ, ಅದೇ ವ್ಯಕ್ತಿ ಇವತ್ತು ಬೆಂಗಳೂರಿನಲ್ಲಿ ಅದೇರೀತಿ ಅಡ್ವೆರೆಟೈಸ್‌ಮೆಂಟ್ ಕೊಟ್ಟು ಹಾಲಿಡೇ ಇನ್ ಹೋಟೆಲಿನಲ್ಲಿ ಉಳಿದುಕೊಂಡು ಹುಡುಗ ಹುಡಿಗಿಯವರಿಗೆ ಇಂಟರ್‌ವ್ಯೂ ನಡೆಸಿದ್ದಾರೆ. ೬೦ ಜನ ಹುಡುಗರಿಗೆ ಮೋಸ ಮಾಡಿ ಬೀದಿ ಪಾಲು ಮಾಡಿದಂತಹವನು ಇವತ್ತು ಬೆಂಗಳೂರಿನಲ್ಲಿರುವುದರಿಂದ, ಅವನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಇನ್ ವೆಸ್ಟಿಗೇಷನ್ ಆಗಬೇಕು. ಕೂಡಲೇ ಆತನನ್ನು ಕೂಡಲೆ ಬಂಧಿಸಬೇಕೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ತಮಗೆ ಕಳುಹಿಸಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

ಉಪಾಧ್ಯಕ್ಷರು.—ನಿಮ್ಮಹತ್ತಿರ ಇರತಕ್ಕ ಮಾಹಿತಿಯನ್ನು ದಯವಿಟ್ಟು ಕಳುಹಿಸಿಕೊಡಿ.